7)	ವೆಂಕಟೇಶ್ವರ ಇಂಡಸ್ಟ್ರೀಸ್, ನೆಲಮಂಗಲ	9,300-00
	ಒಟ್ಟು	48,487-00

ಈ) ಈಗಾಗಲೇ ಘಟಕಗಳಿಗೆ ತಿಳುವಳಿಕೆ ಪತ್ರಗಳನ್ನು ನೀಡಲಾಗಿದ್ದು, ಮರುಪಾವತಿ ಆಗದೆ ಇರುವ ಕಾರಣ ಬಾಕಿ ಇರುವ ಹಣವನ್ನು ಭೂ ಕಂದಾಯ ವಸೂಲಿ ರೀತಿಯಲ್ಲಿ ವಸೂಲಿ ಮಾಡಲು, ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಕೊಡಲಾಗುವುದು.

ವಿಷಯ:- ಸಾಮಾಜಿಕ ಬಹಿಷ್ಕಾರದ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1329 (1545)

ಶ್ರೀ ಕೆ. ಸಿದ್ದಯ್ಯ (ಸಂತೆ ಮಾರನಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಾಗರಿಕ ಹಕ್ಕುಗಳನ್ನು ಚಲಾಯಿಸಿದ್ದಕ್ಕಾಗಿ ಪರಿಶಿಷ್ಟ ಜಾತಿ ಜನರಿಗೆ ಅನೇಕ ಗ್ರಾಮಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಾಮಾಜಿಕ ಬಹಿಷ್ಕಾರ ನಡೆದ ಗ್ರಾಮಗಳಾವುವು (ಗ್ರಾಮಗಳ ಹೆಸರುಗಳನ್ನು ನಮೂದಿಸುವುದು)

ಇ) ಸಾಮಾಜಿಕ ಬಹಿಷ್ಕಾರಕ್ಕೊಳಗಾದ ಜನರು ಉಪವಾಸದಿಂದ ನರಳುತ್ತಿರುವುದು ನಿಜವಲ್ಲವೇ ?

ಈ) ಶೋಷಣೆ ಮತ್ತು ಕಿರುಕುಳದಿಂದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನರಿಗೆ ರಕ್ಷಣೆ ನೀಡುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಮೈಸೂರು ಜಿಲ್ಲೆ : 1)ಮಾದಪುರ 2)ಆಲಹಳ್ಳಿ, 3)ಮುಸುವಿನಕೊಪ್ಪಲು, 4) ಚಿಲಕವಾಡಿ, 5)ಬನ್ನೂರು 6) ಅರಕಲವಾಡಿ

ಮಂಡ್ಯ ಜಿಲ್ಲೆ : ಮಾಚನಾಯಕನಹಳ್ಳಿ

ಇ) ಇಲ್ಲಿಯವರೆವಿಗೆ ಅಂತಹ ಘಟನೆಗಳ ವರದಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ದೌರ್ಜನ್ಯ ಎಸಗುವವರ ವಿರುದ್ಧ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ(ದೌರ್ಜನ್ಯ ನಿವಾರಣಾ) ಕಾಯ್ದೆ 1989 ರ ಮೂಲಕ ಕಠಿಣ ಕ್ರಮಕೈಗೊಳ್ಳಲಾಗುತ್ತದೆ ನಾಗರಿಕ ಹಕ್ಕು ಸಂರಕ್ಷಣಾ ಘಟಕದ ಮೂಲಕ ಸಂವಿಧಾನದತ್ತವಾದ ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಕ್ರಮಕೈಗೊಳ್ಳಲಾಗುತ್ತದೆ.

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಜನರು ಶೋಷಣೆಗೆ ಈಡಾಗದಂತೆ ಸರ್ಕಾರ ಅವರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳ ಮೂಲಕ ಸಹಾಯ ನೀಡುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ ಅವರು ಹೆಚ್ಚಾಗಿ ವಾಸಿಸುವ ಸ್ಥಳಗಳಲ್ಲೇ ಕುಡಿಯುವ ನೀರಿನ ಬಾವಿ ಒದಗಿಸಲಾಗುತ್ತಿದೆ. ಅಗತ್ಯ ವಸ್ತುಗಳು ದೊರಕುವಂತಾಗಲು ನ್ಯಾಯ ಬೆಲೆ ಅಂಗಡಿಗಳನ್ನು ಸ್ಥಾಪಿಸಲಾಗುತ್ತಿದೆ. ಹಾಗೂ ಕೂಲಿಗೆ ಕರೆಯದೆ ಬಹಿಷ್ಕರಿಸಿದ ಸಂದರ್ಭದಲ್ಲಿ ಜವಾಹರ್ ರೋಜಗಾರ್ ಯೋಜನೆ ಮುಖಾಂತರ ಕೆಲಸ